ಉಪಾಧ್ಯಕ್ಷರು : ತಾವು ಮಾತನಾಡಿದ್ದು ರೆಕಾರ್ಡಿಗೆ ಹೋಗುವುದಿಲ್ಲ. ನಿಮ್ಮ ನೋಟೀಸನ್ನು ಈಗಾಗಲೇ ರಿಜೆಕ್ಟ್ ಮಾಡಲಾಗಿದೆ. ತಾವು ಮಾತನಾಡಿದ್ದು ರೆಕಾರ್ಡಿಗೆ ಹೋಗುವುದಿಲ್ಲ.

(ಮಾನ್ಯ ಸದಸ್ಯರು ಮಾತನಾಡುತ್ತಲೇ ಇದ್ದರು. ಉಪಾಧ್ಯಕ್ಷರ ಆದೇಶದ ಮೇರೆಗೆ ಅವರು ಮಾತುಗಳನ್ನು ದಾಖಲು ಮಾಡಿಕೊಳ್ಳಲಿಲ್ಲ)

ಶ್ರೀ ಗೋವಿಂದ ಎಂ. ಕಾರಜೋಳ : ಹಾಗಾದರೆ ನಾನು ಧರಣಿ ಕುಳಿತುಕೊಳ್ಳ ಬೇಕಾಗುತ್ತದೆ .....

ಉಪಾಧ್ಯಕ್ಷರು : ಈಗಾಗಲೇ ತಮ್ಮ ಅರ್ಜಿಯನ್ನು ರಿಜೆಕ್ಟ್ ಮಾಡಲಾಗಿದೆ. ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಗೋವಿಂದ ಎಂ. ಕಾರಜೋಳ : ನಾನು ಧರಣಿ ಕುಳಿತುಕೊಳ್ಳುತ್ತೇನೆ.

(ಮಾನ್ಯ ಸದಸ್ಯರಾದ ಶ್ರೀ ಗೋವಿಂದ ಕಾರಜೋಳ ಅವರು ಸಭಾಧ್ಯಕ್ಷರ ಪೀಠದ ಮುಂಭಾಗದಲ್ಲಿ ಧರಣಿ ಕುಳಿತುಕೊಂಡರು)

(ಗೊಂದಲ)

ಉಪಾಧ್ಯಕ್ಷರು : ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ ಈಗಾಗಲೇ ತಮ್ಮ ಅರ್ಜಿಯನ್ನು ರಿಜೆಕ್ಟ್ ಮಾಡಲಾಗಿದೆ. ರೂಲ್ಸ್ ಪ್ರಕಾರ ತಮಗೆ ಅದನ್ನು ಪ್ರಸ್ತಾಪ ಮಾಡುವುದಕ್ಕೆ ಆಗುವುದಿಲ್ಲ. ಹೊರಗಿನ ವಿಷಯವನ್ನು ಇಲ್ಲಿ ಚರ್ಚೆ ಮಾಡುವುದಕ್ಕೆ ಆಗುವುದಿಲ್ಲ. ಈಗಾಗಲೇ ಅದನ್ನು ಅವರು ಡಿನೈ ಮಾಡಿಬಿಟ್ಟಿದ್ದಾರೆ. ನಾನು ಮಾತನಾಡಿಲ್ಲ ಎಂದು ಅವರು ಡಿನೈ ಮಾಡಿದಮೇಲೆ ತಾವು ಈ ರೀತಿ ಮಾಡಿದರೆ ಹೇಗೆ? ಈಗ ಮಾನ್ಯ ಸದಸ್ಯರು ದಯವಿಟ್ಟು ತಮ್ಮ ಸ್ಥಾನಕ್ಕೆ ಹೋಗಬೇಕು. ಸದನದ ನಿಯಮಾವಳಿ ಪ್ರಕಾರ ನಾವು ನಡೆದುಕೊಳ್ಳಬೇಕು. ತಾವು ಸದಸ್ಯರಾಗಿ ಈ ರೀತಿ ಮಾಡಬಾರದು. ಈಗಾಗಲೇ ತಮ್ಮ ಅರ್ಜಿಯನ್ನು ರಿಜೆಕ್ಟ್ ಮಾಡಿದ್ದಾರೆ. ತಾವು ಈ ರೀತಿ ಮಾಡಿದರೆ ಹೇಗೆ? ಇಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಇಲ್ಲ. ಅವರು ಕೂಡ ಈಗಾಗಲೇ ಡಿನೈ ಮಾಡಿದ್ದಾರೆ. ಅವರು ಇಲ್ಲಿ ಇಲ್ಲ. ಅವರೂ ಕೂಡ ಡಿನೈ ಮಾಡಿರುವುದರಿಂದ ತಮಗೆ ಚರ್ಚೆ ಮಾಡುವುದಕ್ಕೆ ಅವಕಾಶ ಇಲ್ಲ. ಅವರು ಇಲ್ಲದೇ ಇದ್ದಾಗ ನೀವು ಪ್ರಸ್ತಾಪ ಮಾಡಿದರೆ ಅದು ಸರಿಯಾಗುವುದಿಲ್ಲ. ತಮ್ಮ ಅರ್ಜಿಯನ್ನು ರಿಜೆಕ್ಟ್ ಮಾಡಿದ್ದೇವೆ. ಅವರು ಡಿನೈ ಮಾಡಿದ್ದಾರೆ. ಮತ್ತೆ ಇದನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಇಲ್ಲವೆಂದು ತಮಗೆ ಹೇಳಿಬಿಟ್ಟಿದ್ದೇನೆ.

ಶ್ರೀ ಸಿದ್ದರಾಮಯ್ಯ (ಉಪಮುಖ್ಯಮಂತ್ರಿಗಳು) : ಅವರು ಕೊಟ್ಟಿರತಕ್ಕಂಥ ನೋಟೀಸ್ ಕೂಡ ರಿಜೆಕ್ಟ್ ಆಗಿದೆ. ಸಂಬಂಧಪಟ್ಟ ಮಂತ್ರಿಗಳಾದ ಶ್ರೀ ಎಸ್.ಎಸ್. ಪಾಟೀಲ್ ಅವರು ಇದನ್ನು ಟೋಟಲ್ ಆಗಿ ಡಿನೈ ಮಾಡಿದ್ದಾರೆ, ನಾನು ಆ ತರಹ ಹೇಳಿಲ್ಲ ಎಂದು ಮತ್ತೆ ಪದೇ ಪದೇ ಮಾನ್ಯ ಸದಸ್ಯರಾದ ಕಾರಜೋಳ ಅವರು ಅದನ್ನು ಎತ್ತಿ ಪ್ರಸ್ತಾಪ ಮಾಡತಕ್ಕಂಥಾದ್ದು ಸರಿಯಾದುದ್ದಲ್ಲ. ಒಮ್ಮೆ